**ದಿನಾಂಕಃ 14.10.2024 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ವಿ. ವಕೀಲರಿಂದಃ–**

ನಾನು ಈ ಪ್ರಕರಣದಲ್ಲಿ ವಾದಿಯ ಅಧಿಕಾರ ಪತ್ರ ಹೊಂದಿದವನಾಗಿರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಈ ದಿನ ನಾನು ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಬೇಕೆಂದು ನಿವೇದಿಸಿಕೊಳ್ಳುತ್ತೇನೆ.

| **ಕ್ರ.ಸಂಖ್ಯೆ** | **ದಾಖಲೆಗಳ ವಿವರ** | **ನಿಶಾನೆಗಳು** |
|---|---|---|
| 1. | ವಿಶೇಷ ಅಧಿಕಾರ ಪತ್ರ | ನಿ.ಪಿ–1 |
| 2. | ಏಳು ಪಹಣಿ ಪತ್ರಿಕೆಗಳು | ನಿ.ಪಿ–2 ರಿಂದ 8 |
| 3. | ಎಂ.ಆರ್. ಸಂಖ್ಯೆಃಟಿ12/2015–16 ನೇದ್ದರ ಧೃಢೀಕೃತ ಪ್ರತಿ | ನಿ.ಪಿ–9 |
| 4. | ಉಪನೋಂದಣಾಧಿಕಾರಿಗಳು, ಹಿರಿಯೂರು ಇವರಿಗೆ ನೀಡಿದ ಪತ್ರದ ಕಛೇರಿ ಪ್ರತಿ | ನಿ.ಪಿ–10 |
| 5. | ಪಹಣಿ ಪತ್ರಿಕೆ | ನಿ.ಪಿ–11 |
| 6. | ತಹಶೀಲ್ದಾರ್, ಹಿರಿಯೂರು ಇವರಿಗೆ ನೀಡಿದ ಪತ್ರದ ಧೃಢೀಕೃತ ಪ್ರತಿ | ನಿ.ಪಿ–12 |
| 7. | ಪಹಣಿ ಪತ್ರಿಕೆ | ನಿ.ಪಿ–13 |
| 8. | ಎಂ.ಆರ್. ಸಂಖ್ಯೆಃಹೆಚ್18/2019–20 ರ ಧೃಢೀಕೃತ ಪ್ರತಿ | ನಿ.ಪಿ–14 |

**ಮುಂದುವರಿದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.